**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ., ಸೊರಬ**

**ಉಪಸ್ಥಿತರು:** ಶ್ರೀ ರಾಜು .ಕೃ. ಶೇಡಬಾಳ್ಕರ್

ಬಿ.ಕಾಂ., ಎಲ್.ಎಲ್.ಬಿ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ.ದಂಡಾಧಿಕಾರಿಗಳು ಸೊರಬ.

ದಿನಾಂಕ: 4 ನೇ ಜುಾನ್ -2026

**ಅಸಲು ದಾವೆ ಸಂಖ್ಯೆ: 9/2025**

**ವಾದಿ :** ಮೆಹಬೂಬ್ ಅಲಿ

**- ವಿರುದ್ಧ -**

**ಪ್ರತಿವಾದಿಯರು :** ಭಾಷ್ ಸಾಬ್ ಹಾಗೂ ಇತರರು

**ಮಧ್ಯಂತರ ಅರ್ಜಿ ಸಂಖ್ಯೆ I:**

**ಅರ್ಜಿದಾರರು :** ಮೆಹಬೂಬ್ ಅಲಿ

**(ವಾದಿಯ ಪರ ಶ್ರೀ.ಕೆ.ಎನ್.ಎಸ್., ವಕೀಲರು)**

**- ವಿರುದ್ಧ -**

**ಎದುರುದಾರರು :** ಭಾಷ್ ಸಾಬ್ ಹಾಗೂ ಇತರರು

**(1 ನೇ ಪ್ರತಿವಾದಿಯ ಪರ ಶ್ರೀ.ಜಿ.ಎಂ.ಪಿ.,ವಕೀಲರು)**

**(2 ರಿಂದ 4 ನೇ ಪ್ರತಿವಾದಿಯ ಪರ ಡಿ.ಹೆಚ್ /.ಹೆಚ್.ಎಂ.ಪಿ.,ವಕೀಲರು)**

**ಸಿವಿಲ್ ಪ್ರಕ್ರಿಯೆ ಸಂಹಿತೆ ಕ್ರಮಾದೇಶ XXXIX ನಿಯಮ 1 ಮತ್ತು 2 ರ ಅಡಿಯಲ್ಲಿ ವಾದಿ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ I ರ ಮೇಲಿನ ಆದೇಶ**

ವಾದಿಯು ಪ್ರಸ್ತುತ ದಾವೆಯನ್ನು ಪ್ರತಿವಾದಿಯರ ವಿರುದ್ಧ ಶಾಶ್ವತ ಪ್ರತಿಬಂಧಕಾಜ್ಞೆ

ಪರಿಹಾರ ಕೋರಿ ಸಲ್ಲಿಸಿರುತ್ತಾರೆ. ವಾದಿಯು ವಾದ ಪತ್ರದೊಂದಿಗೆ ಮಧ್ಯಂತರ ಅರ್ಜಿ ಸಂಖ್ಯೆI ಅನ್ನು ಸಲ್ಲಿಸಿ, ಪ್ರತಿವಾದಿಗಳು ಮತ್ತು ಅವರ ಪರವಾಗಿನ ಜನರು ವಾದಿಯ ಅನುಭವದಲ್ಲಿರುವ ದಾವಾ ಸ್ವತ್ತುಗಳಿಗೆ ಅತಿಕ್ರಮ ಪ್ರವೇಶ ಮಾಡಿ ಅಡ್ಡಿ ಆತಂಕಪಡಿಸದಂತೆ ತಾತ್ಕಾಲಿಕ ಪ್ರತಿಬಂಧಕಾಜ್ಞೆ ಆದೇಶವನ್ನು ನೀಡಬೇಕೆಂದು ಕೋರಿರುತ್ತಾರೆ.

<u>ಶೆಡ್ಯೂಲ್</u>

ಸೊರಬ ತಾಲ್ಲೂಕು, ಆನವಟ್ಟಿ ಹೋಬಳಿ, ಹುರುಳಿ ಗ್ರಾಮದ ಸರ್ವೆ ನಂ.272 ರಲ್ಲಿ 3 ಎಕರೆ ತರಿ. ಆಕಾರ 20 ರೂ.ಇದಕ್ಕೆ ಚಕ್ಕುಬಂದಿಃ- ಪೂರ್ವಕ್ಕೆಃ ಗುಬ್ಬಿ ನಿಂಗಪ್ಪನ ಜಮೀನು, ಪಶ್ಚಿಮಕ್ಕೆಃ ರಸ್ತೆ, ಉತ್ತರಕ್ಕೆಃ ಇದೇ ಸರ್ವೆ ನಂಬರ್ ನಲ್ಲಿ ಹೆಚ್.ಸಿ. ಮಹಾದೇವಮ್ಮನ ಜಮೀನು, ದಕ್ಷಿಣಕ್ಕೆಃ ಕೆರೆಯ ವಡ್ಡು. ಈ ದಾವೆಯು ವಸ್ತು ವಿಷಯವಾಗಿದ್ದು, ಇನ್ನು ಮುಂದೆ ದಾವಾ ಸ್ವತ್ತು ಎಂದು ಸಂಬೋದಿಸಲಾಗುವುದು.

2. ಸದರಿ ಮಧ್ಯಂತರ ಅರ್ಜಿ ಸಂಖ್ಯೆI ರೊಂದಿಗೆ ವಾದಿಯು ತನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದಲ್ಲಿ, ದಾವಾ ಸ್ವತ್ತು ವಾದಿಯ ತಂದೆಗೆ ಭೂ ಸುಧಾರಣಾ ಕಾನೂನಿನ ಅನ್ವಯ ಹಕ್ಕುಪ್ರಾಪ್ತವಾಗಿದೆ.ಭೂ ನ್ಯಾಯಮಂಡಳಿಯ ಆದೇಶದ ಪ್ರಕಾರ ವಾದಿಯ ತಂದಗೆ ಹಕ್ಕುಪತ್ರ ನೀಡಿರುತ್ತಾರೆ. ದಾವಾ ಆಸ್ತಿಯು ವಾದಿಯ ತಂದೆಯ ಸ್ವಂತ ಆಸ್ತಿಯಾಗಿದೆ. ದಾವಾ ಆಸ್ತಿಯು ವಾದಿಯ ತಂದೆಯ ನಂತರ ವಾದಿಗೆ ಸೇರಬೇಕೆಂದು ವಾದಿಯ ತಂದೆಯವರು 30.09.1996 ರಂದು ಸಾಕ್ಷಿಗಳ ಸಮಕ್ಷಮ ಒಂದು ಮರಣಶಾಸನವನ್ನು ಬರೆಯಿಸಿ ಹರಿಹರದಲ್ಲಿ ನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಾಯಿಸಿರುತ್ತಾರೆ. ವಾದಿಯ ತಂದೆಯವರು 18.07.1998 ರಂದು ತೀರಿಕೊಂಡಿರುತ್ತಾರೆ. ಅವರು ತೀರಿದ ನಂತರ ದಾವಾ ಆಸ್ತಿಯ ಅನುಭವ ವಾದಿಯದೇ ಆಗಿರುತ್ತದೆ. ನೊಂದಾಯಿತ ಮರಣಶಾಸನದ ಪ್ರಕಾರ ವಾದಿಯ ಹೆಸರಿಗೆ ಖಾತೆ ಮತ್ತು ಪಹಣಿ ಮಾಡಲು ಸೊರಬ ತಹಶೀಲ್ದಾರ್ ರವರಿಗೆ ಅರ್ಜಿ ಕೊಟ್ಟಾಗ ತಹಶೀಲ್ದಾರ್ ರವರು ಖಾತೆ ಮಾಡಲು ಸಾಧ್ಯವಿಲ್ಲವೆಂದು ಹಿಂಬರಹ ನೀಡಿದ್ದರು. ಅದರ ವಿರುದ್ಧ ವಾದಿಯು ಸಾಗರದ ಎಸಿ ಕೋರ್ಟಿನಲ್ಲಿ ಆರ್.ಎ.4/2020 ರಲ್ಲಿ ಅಪೀಲು ಮಾಡಿದ್ದೆನು. ಸದರಿ ಅಪೀಲ್ ನಲ್ಲಿ ಮರಣಶಾಸನವನ್ನು ಸಿವಿಲ್ ಕೋಟಿನಲ್ಲಿ ರುಜುವಾತುಪಡಿಸಿಕೊಂಡು ಕೋರ್ಟ್ ಆದೇಶವನ್ನು ಹಾಜರುಪಡಿಸುವಂತೆ ಹೇಳಿ ವಾದಿ ಅಪೀಲ್ ನ್ನು ವಜಾ ಮಾಡಿದ್ದರು. ವಾದಿ ಅಪೀಲ್ ವಜಾ ಆದ ನಂತರ ಪ್ರತಿವಾದಿಗಳು ಎಲ್ಲರೂ ಸೇರಿ ವಾದಿಯನ್ನು ದಾವಾ ಆಸ್ತಿಯಿಂದ ಹೊರಗೆ

ಹಾಕಲು ಪ್ರಯತ್ನ ಮಾಡಿದ್ದರಿಂದ ಈ ದಾವೆಯನ್ನು ದಾಖಲಿಸುವ ಅವಶ್ಯಕತೆ ಬಂದಿರುತ್ತದೆ.

ಮುಂದುವರೆದು ಪ್ರತಿವಾದಿಗಳಿಗೆ ದಾವಾ ಆಸ್ತಿಯಲ್ಲಿ ಯಾವೊಂದು ಹಕ್ಕುಬಾಧ್ಯತೆಗಳು ಅನುಭವಗಳು ಇರುವುದಿಲ್ಲ. 3 ಮತ್ತು 4 ನೇ ಪ್ರತಿವಾದಿಗಳು ವಾದಿ ಒಪ್ಪಿಗೆ ಮತ್ತು ಪರವಾನಿಗೆ ಇಲ್ಲದೇ ಆಸ್ತಿಯ ಪೈಕಿ 1.5 ಎಕರೆ ಜಮೀನಿನ ಪಹಣಿ ಖಾತೆಯನ್ನು ತಮ್ಮ ಹೆಸರಿಗೆ ಬರೆಸಿಕೊಂಡಿರುತ್ತಾರೆ. ಈ ವಿಷಯವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕೇಳಲಾಗಿ ಸಂಬಂದಪಟ್ಟ ಅದಿಕಾರಿಗಳು ಕೋರ್ಟಿನಲ್ಲಿ ವ್ಯವಹರಿಸಲು ತಿಳಿಸಿದ್ದರಿಂದ ಈ ದಾವೆಯನ್ನು ಸಲ್ಲಿಸಿರುತ್ತಾರೆ.

ಮುಂದುವರೆದು, 3 ಮತ್ತು 4 ನೇ ಪ್ರತಿವಾದಿಗಳು ಅವರ ಹೆಸರಿಗೆ ದಾವಾ ಅಸ್ತಿಯ 1.5 ಎಕರೆ ಜಮೀನು ಖಾತೆ ಪಹಣಿ ಇರುವುದರಿಂದ ಪ್ರತಿವಾದಿಗಳು ಎಲ್ಲರೂ ಸೇರಿ ದಾವಾಆಸ್ತಿಯಿಂದ ವಾದಿಯನ್ನು ಹೊರಗೆ ಹಾಕಲು ಪ್ರಯತ್ನ ಮಾಡಿದ್ದಾರೆ. ಪ್ರತಿವಾದಿಗಳಿಗೆ ಜನಬೆಂಬಲ, ಹಣಕಾಸಿನ ಸಹಾಯ ಮತ್ತು ರಾಜಕೀಯ ಜನರ ಸಹಾಯ ಇರುತ್ತದೆ. ವಾದಿಗೆ ಸ್ಥಳದಲಿಲ ಪ್ರತಿವಾದಿಗಳ ಕಾನೂನುಬಾಹಿರ ಕ್ರಮವನ್ನು ತಡೆಗಟ್ಟಲು ಸನ್ನಿದಿ ನ್ಯಾಯಲಾಯದ ಸಹಾಯುವಿಲ್ಲದೇ ಸಾಧ್ಯವಿರುವುದಿಲ್ಲ. ವಾದಿ ಹೆಸರಿಗೆ ನೊಂದಾಯಿತ ಮರಣಶಾಸನವು ಇರುತ್ತದೆ. ಸ್ವಾಧೀನವು ವಾದಿಯದೇ ಇರುತ್ತದೆ. ಪ್ರತಿವಾದಿಗಳು ಕಾನೂನುಬಾಹಿರ ಕೃತ್ಯವನ್ನು ಸ್ಥಳದಲ್ಲಿ ವಾದಿಗೆ ಎದುರಿಸಲು ಸಾಧ್ಯವಾಗದೇ ಇದ್ದ ಕಾರಣ ಸನ್ನಿಧಿ ನ್ಯಾಯಾಲಯವು ಈ ಕೇಸು ತೀರ್ಮಾನ ಆಗುವವರೆಗೆ ಪ್ರತಿವಾದಿಗಳ ವಿರುದ್ಧ ಹಂಗಾಮಿ ಇಂಜಂಕ್ಷನ್ ಆದೇಶವನ್ನು ನೀಡುವುದರ ಮೂಲಕ ಪ್ರತಿವಾದಿಗಳು ದಾವಾ ಸ್ವತ್ತಿಗೆ ಅಕ್ರಮ ಪ್ರವೇಶ ಮಾಡಿ ವಾದಿಯನ್ನು ದಾವಾ ಸ್ವತ್ತಿನಿಂದ ಹೊರೆಗೆ ಹಾಕದಂತೆ ಹಂಗಾಮಿ ಆದೇಶದ ಮೂಲಕ ನಿರ್ಬಂದಿಸಲು ಕೋರಿ ಈ ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ಸಲ್ಲಿಸಿರುತ್ತಾರೆ.

3 ಪ್ರತಿವಾದಿಯರಿಗೆ ನ್ಯಾಯಾಲಯದಿಂದ ಸಮನ್ಸ್ ಜಾರಿಯಾದ ನಂತರ ತಮ್ಮ ವಕೀಲರ ಮುಖಾಂತರ ನ್ಯಾಯಾಲಯದ ಮುಂದೆ ಹಾಜರಾಗಿದ್ದು, 1 ನೇ ಪ್ರತಿವಾದಿಯು ಪ್ರತಿವಾದ ಪತ್ರವನ್ನು ಸಲ್ಲಿಸಿದ್ದು, 2 ರಿಂದ 4 ನೇ ಪ್ರತಿವಾದಿಯರು 1 ನೇ ಪ್ರತಿವಾದಿ ಸಲ್ಲಿಸಿದ ಪ್ರತಿವಾದ ಪತ್ರವನ್ನು ಅಳವಡಿಸಿಕೊಂಡಿದ್ದು ಹಾಗೂ ಪ್ರತಿವಾದ ಪತ್ರವನ್ನು ಮಧ್ಯಂತರ ಅರ್ಜಿ ಸಂಖ್ಯೆ-1 ಕ್ಕೆ ಪ್ರತಿವಾದ ಪತ್ರವನ್ನು ತಕರಾರು ಎಂದು ಪರಿಗಣಿಸಬೇಕೆಂದು ಮೆಮೋ ದಾಖಲಿಸಿರುತ್ತಾರೆ.

4. ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರದಲ್ಲಿನ ಪ್ಯಾರಾ ನಂ.2 ರಿಂದ 4 ರವೆರಗಿನ ಎಲ್ಲಾ ಸಂಗತಿಗಳನ್ನು ಅಲ್ಲಗಳೆದು, ನಿಜ ಸಂಗತಿಗಳು ನುಡಿಯುವುದೇನೆಂದರೆ, ಸೊರಬ ತಾಲ್ಲೂಕು, ಆನವಟ್ಟಿ ಹೋಬಳಿ, ಹುರುಳಿ ಗ್ರಾಮದ ಸರ್ವೆ ನಂ.272 ರಲ್ಲಿ 03 ಎಕರೆ ಜಮೀನನ್ನು ಈ ಪ್ರತಿವಾದಿಯರ ತಂದೆ ನೀರಮಣಿ ರಾಜಾಸಾಬ್ ಇವರು ಕರ್ನಾಟಕ ಭೂ ಸುದಾರಣಾ ತಿದ್ದುಪಡಿ ಕಾಯ್ದೆಯಂತೆ ಪಾರಂ ನಂ.7 ರ ಗೇಣಿ ಅರ್ಜಿಯನ್ನು ಸಲ್ಲಿಸಿದ್ದು, ಭೂ ನ್ಯಾಯಾ ಮಂಡಳಿ ಸೊರಬ ಇವರಿಂದ ದಿನಾಂಕ 19.08.1981 ರಂದು ಆದೇಶವಾಗಿ ಆ ಪ್ರಕಾರ 3 ಎಕರೆ ಸ್ವತ್ತನ್ನು ಗೇಣಿ ಕಾಯ್ದೆ ಅಡಿಯಲ್ಲಿ ಮಂಜೂರು ಮಾಡಿದ್ದು, ಅದರಂತೆ ಪಾರಂ ನಂ.10 ರ ಹಕ್ಕು ಪತ್ರವನ್ನು ನೀಡಿದ್ದು, ಸದರಿ ನೀರಮಣಿ ರಾಜಾಸಾಬ್ ಇವರ ಹೆಸರಿಗೆ ಸದರಿ ಆದೇಶದ ಪ್ರಕಾರ ಖಾತೆ ಬದಲಾವಣೆ ಆಗುವುದರೊಂದಿಗೆ ಇವರು ಏಕೈಕ ಹಕ್ಕುದಾರರಾಗಿ, ಮಾಲೀಕರಾಗಿ ಮತ್ತು ಸ್ವಾದೀನದಾರರಾಗಿ ಸ್ವತ್ತನ್ನು ಅನುಭವಿಸಿಕೊಂಡು ಬಂದಿರುತ್ತಾರೆ. ಈ ಪ್ರತಿವಾದಿಯ ತಂದೆಯು ದಿನಾಂಕ 18.07.2018 ರಂದು ಮೃತಪಟ್ಟಿರುತ್ತಾರೆ.

ಮುಂದುವರೆದು, ಸದರಿ ಸರ್ವೆ ನಂ.272 ರಲ್ಲಿ 3 ಎಕರೆ ಸ್ವತ್ತನ್ನು ಈ ಪ್ರತಿವಾದಿಯ ತಂದೆ ನೀರಮಣಿ ರಾಜಾಸಾಬ್ ಇವರು ಸ್ವತಂತ್ರವಾಗಿ ಗೇಣಿ ಪಡೆದು, ಗೇಣಿ ಸಾಗುವಳಿ ಮಾಡಿಕೊಂಡು ಬಂದು, ಕರ್ನಾಟಕ ಭೂ ಸುದಾರಣಾ ತಿದ್ದುಪಡಿ ಕಾಯ್ದೆ ಅಡಿಯಲ್ಲಿ ಪಾರಂ ನಂ.7 ರ ಗೇಣಿ ಅರ್ಜಿಯನ್ನು ಸಲ್ಲಿಸಿದ್ದು, ಆ ಪ್ರಕಾರ ಗೇಣಿ ಅರ್ಜಿಯನ್ನು ಪುರಸ್ಕರಿಸಿ ಭೂ ನ್ಯಾಯ ಮಂಡಚಿ ಸೊರಬ ಇವರು ಸ್ವತ್ತನ್ನು ಮಂಜಾರು ಮಾಡಿದ್ದು ಇರುತ್ತದೆ. ಹೀಗೆ ಸದರಿ ಸರ್ವೆ ನಂ .272 ರ ಪೂರಾ 03 ಎಕರೆ ಸ್ವತ್ತಿಗೆ ಸದರಿ ನೀರಮಣಿ ರಾಜಾಸಾಬ್ ಇವರು ಏಕೈಕ ಹಕ್ಕುದಾರರಾಗಿ, ಮಾಲೀಕರಾಗಿ ಮತ್ತು ಸ್ವಾದೀನದಾರರಾಗಿ ಸ್ವತ್ತನ್ನು ಅನುಭವಿಸಿಕೊಂಡು ಬಂದಿರುತ್ತಾರೆ.

ಮುಂದುವರೆದು, ಸದರಿ ಸರ್ವೆ ನಂ.272 ರ 03 ಎಕರೆ ಸ್ವತ್ತಿನ ಮೇಲೆ ಸದರಿ ಪ್ರ.2 ವಾದಿಯ ತಂದೆ ನೀರಮಣಿ ರಾಜಾಸಾಬ್ ಇವರ ಸಹೋದರನಾದ ಮೋದೀನ್ ಸಾಬ್ ಇವರಿಗೆ ಯಾವುದೇ ರೀತಿಯ ಹಕ್ಕು ಭಾದ್ಯತೆಗಳು ಸ್ವಾದೀನಾನುಭವದಲ್ಲಿರುವುದಿಲ್ಲ.

ಮುಂದುವರೆದು, ಈ ಪ್ರತಿವಾದಿಯ ತಂದೆ ನೀರಮಣಿ ರಾಜಾಸಾಬ್ ಇವರು ಮರಣ ಹೊಂದುವ ಪೂರ್ವದಲ್ಲಿ ಸುಮಾರು 20 ವರ್ಷಗಳಿಂದ ಅನಾರೋಗ್ಯ ಪೀಡಿತವಾಗಿ ಹಾಸಿಗೆ ಹಿಡಿದಿದ್ದು, ಸದರಿ ಕುಟುಂಬದಲ್ಲಿ ನೀರಮಣಿ ರಾಜಾಸಾಬ್ ಇವರ ಮೂರು ಜನ ಗುಂಡು ಮಕ್ಕಳಾದ 1 ನೇ ಪ್ರತಿವಾದಿ ಭಾಷ್ ಸಾಬ್, 2 ನೇ ಪ್ರತಿವಾದಿ ಅಬ್ದುಲ್ ರೆಹಮಾನ್

ಯಾನೆ ಅಬ್ದುಲ್ ಸಾಬ್ ಹಾಗೂ ವಾದಿ ಮೆಹಬೂಬ್ ಅಲಿ ಇವರುಗು ಸದರಿ ಸರ್ವೆ ನಂ.272 ರ 03 ಎಕರೆ ಸ್ವತ್ತನ್ನು ಸಾಮೂಹಿಕವಾಗಿ ಸಾಗುವಳಿ ಮಾಡಿಕೊಂಡು ಜಂಟಿಯಾಗಿ ಅನುಭವಿಸಿಕೊಂಡು ಬಂದಿದ್ದು ಇರುತ್ತದೆ.

ಮುಂದುವರದು, ಈ ಪ್ರತಿವಾದಿಯ ತಂದೆ ನೀರಮಣಿ ರಾಜಾಸಾಬ್ ಇವರು ಅನಕ್ಷರಸ್ಥರಾಗಿದ್ದು, ಸರಿ ತಪ್ಪು ವಿಮರ್ಶೆ ಮಾಡುವ ಸಾಮಾನ್ಯ ಜ್ಞಾನವನ್ನು ಹೊಂದಿದ್ದು ಇರುವುದಿಲ್ಲ. ಸದರಿ ನೀರಮಣಿ ರಾಜಾಸಾಬ್ ಇವರು ಅವರ ಜೀವಿತದ ಅವದಿಯಲ್ಲಿ ಯಾವುದೇ ರೀತಿಯ ಮರಣ ಶಾಸನ ಪತ್ರವನ್ನು ಬರೆಯಿಸಿಟ್ಟಿರುವುದಿಲ್ಲ. ನೀರಮಣಿ ರಾಜಾಸಾಬ್ ಇವರ ಪಾಲನೆ ಪೋಷಣೆಯನ್ನು ಅವರ ಮೂರು ಜನ ಗಂಡು ಮಕ್ಕಳಾದ ವಾದಿ, 1 ಮತ್ತು 2 ನೇ ಪ್ರತಿವಾದಿಯರು ನೋಡಿಕೊಂಡು ಬಂದಿದ್ದು ಇರುತ್ತದೆ.

ಮುಂದುವರೆದು, ನೀರಮಣಿ ರಾಜಾಸಾಬ್ ಇವರ ಮರಣದ ನಂತರದಲ್ಲಿ ಅವರಿಗೆ ಸೇರಿದ ದಾವಾ ಸ್ವತ್ತನ್ನು ಅವರ ಮೂರು ಜನ ಗಂಡು ಮಕ್ಕಳಾದ ವಾದಿ ಹಾಗೂ 1 ಮತ್ತು 2 ನೇ ಪ್ರತಿವಾದಿಯರು ಸಾಮೂಹಿಕವಾಗಿ ಜಂಟಿ ಹಕ್ಕುದಾರರಾಗಿ, ಮಾಲೀಕರಾಗಿ ಮತ್ತು ಸ್ವಾದೀನದಾರರಾಗಿ ಸ್ವತ್ತನ್ನು ಸಾಗುವಳಿ ಮಾಡಿಕೊಂಡು ಅನುಭವಿಸಿಕೊಂಡು ಬಂದಿರುತ್ತಾರೆ.

ಮುಂದುವರದು, ಈ ಪ್ರತಿವಾದಿಯ ತಂದೆ ನೀರಮಣಿ ರಾಜಾಸಾಬ್ ಇವರು ಅವರ ಜೀವಿತದ ಅವದಿಯಲ್ಲಿ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ರೀತಿಯ ವಿಲ್ ಯಾನೆ ಮರಣ ಶಾಸನ ಪತ್ರವನ್ನು ಬರೆಯಿಸಿ ನೊಂದಾಯಿಸಿರುವುದಿಲ್ಲ. ವಾದಿಯು ಹೇಳುವ ದಿನಾಂಕ 30.09.1996 ರ ನೊಂದಾಯಿತ ಮರಣ ಶಾಸನವು ಕೇವಲ ಹಾಳೆಯ ಮೇಲಿನ ಅಕ್ರಮವಾಗಿ ಸೃಷ್ಟಿಸಿಕೊಂಡ ಕೊಟ್ಟಿ ದಾಖಲೆಯಾಗಿರುತ್ತದೆ. ವಾದಿಯು ತನ್ನ ಸಹೋದರರಾದ 1 ಮತ್ತು 2 ನೇ ಪ್ರತಿವಾದಿಗಳಿಗೆ ದಾವಾ ಸ್ವತ್ತಿನ ಮೇಲೆ ಇರುವ ಹಿಸ್ಸೆ ಹಕ್ಕನ್ನು ನಷ್ಟ ಪಡಿಸುವ ದುರುದೆದಃಶದಿಂದ ಅಕ್ರಮವಾಗಿ ಸೃಷ್ಟಿಸಿಕೊಂಡ ದಾಖಲೆಯನ್ನು ಆದರಿಸಿ ಈ ದಾವೆಯನ್ನು ತಂದಿರುತ್ತಾರೆ.

ಮುಂದುವರದೆದು, ಈ ಪ್ರತಿವಾದಿಯ ತಂದೆಯ ಸಹೋದರನ ಮಕ್ಕಳಾದ 3 ಮತ್ತು 4 ನೇ ಪ್ರತಿವಾದಿಯರಿಗೆ ದಾವಾ ಸ್ವತ್ತಿನ ಮೇಲೆ ಯಾವುದೇ ರೀತಿಯ ಹಕ್ಕು ಬಾದ್ಯತೆಗಳು ಯಾ ಸ್ವಾದೀನಾನುಭವ ಇರುವುದಿಲ್ಲ. ಆದರೆ ಸದರಿ 3 ಮತ್ತು 4 ನೇ ಪ್ರತಿವಾದಿಯರು ಅಕ್ರಮವಾಗಿ ಸದರಿ ಸರ್ವೆ ನಂ.272 ರ 03 ಎಕರೆ ಸ್ವತ್ತಿನಪೈಕಿ 01 ಎಕರೆ 20 ಗುಂಟೆ ಸ್ವತ್ತನ್ನು ಸರ್ವೆ ನಂ.272/1 ಎಂದು ಸೃಷ್ಟಿಸಿ ಅದರಲ್ಲಿ ತಮ್ಮ ಹೆಸರನ್ನು ನಮೂದಿಸಿಕೊಂಡಿರುತ್ತಾರೆ.

ಇದಕ್ಕೆ ಸಂಬಂದಪಟ್ಟಂತೆ ಸದರಿ 3 ಮತ್ತು 4 ನೇ ಪ್ರತಿವಾದಿಯರು ಮುಂದಾಗುವರಿದ್ದಾರೆ.

ಮುಂದುವರೆದು, ವಾದಿಯು 3 ಮತ್ತು 4 ನೇ ಪ್ರತಿವಾದಿಯರೊಂದಿಗೆ ಷರೀಕಾಗಿ ಪರಸ್ಪರ ಸಂಚು ರೂಪಿಸಿ, ಪೂರಾ ಆಸ್ತಿಯನ್ನು ಕಬಳಿಸುವ ದುರುದ್ದೇಶದಿಂದ ದಾಖಲೆಗಳನ್ನು ಸೃಷ್ಟಿಸಿಕೊಂಡು ಕಾಲ್ಪನಿಕವಾಗಿ ವಿಷಯಗಳನ್ನು ಹುಟಾರು ಮಾಡಿ ಈ ದಾವೆಯನ್ನು ಸಲ್ಲಿಸಿರುತ್ತಾರೆ.

ಮುಂದುವರೆದು, ಈ ದಾವೆಗೆ ಯಾವುದೇ ವ್ಯಾಜ್ಯ ಕಾರಣ ಇರುವುದಿಲ್ಲ. ದಾವಾ ಸ್ವತ್ತಿನ ಮೇಲೆ ವಾದಿ ಹಾಗೂ 1 ಮತ್ತು 2 ನೇ ಪ್ರತಿವಾದಿಯರಿಗೆ 1/3 ಭಾಗದ ಹಿಸ್ಸೆ ಹಕ್ಕು ಇರುವುದರಿಂದ ಮತ್ತು ಪೂರಾ ಸ್ವತ್ತು ವಾದಿ ಹಾಗೂ 1 ಮತ್ತು 2 ನೇ ಪ್ರತಿವಾದಿಯ ರಜಂಟಿ ಸ್ವಾದೀನಾನುಭವದಲ್ಲಿ ಇರುವುದರಿಂದ ಈ ಪ್ರತಿವಾದಿಗಳು ಅಕ್ರಮವಾಗಿ ದಾವಾ ಸ್ವತ್ತನ್ನು ಪ್ರವೇಶಿಸುವ ಸಂದರ್ಭವೇ ಇರುವುದಿಲ್ಲ.

ಮುಂದುವರೆದು, ದಾವಾ ಸ್ವತ್ತನ್ನು ವಾದಿ ಹಾಗೂ 1 ಮತ್ತು 2 ನೇ ಪ್ರತಿವಾದಿಯರು ಅವರ ತಂದೆಯ ಮರಣದ ನಂತರದಲ್ಲಿ ಸಾಮೂಹಿಕವಾಗಿ ಅನುಭವಿಸಿಕೊಂಡು ಬರುತ್ತಿದ್ದಾರೆ.ಕಾರಣ ಮಧ್ಯಕಾಲೀನ ಅರ್ಜಿ ನಂ.1 ರಲ್ಲಿ ಹೇಳಿದಂತೆ ವಾದಿಯು ಮೇಲ್ನೋಟದ ಕೇಸನ್ನು ಹೊಂದಿರುವುದಿಲ್ಲ. ಬ್ಯಾಲೇನ್ಸ್ ಆಫ್ ಕನ್ವಿನಿಯನ್ಸ್ ವಾದಿಯ ಪರವಾಗಿ ಇರುವುದಿಲ್ಲ. ದಾವಾ ಸ್ವತ್ತಿನ ಇತಿಹಾಸ, ವಾದಿ, 1 ಮತ್ತು 2 ನೇ ಪ್ರತಿವಾದಿಯರ ಸಂಬಂದ ಮತ್ತು ಸದರಿಯವರ ಜಂಟಿ ಸ್ವಾದೀನಾನುಭವದ ಪ್ರಕಾರ ಮಧ್ಯಕಾಲೀನ ಅರ್ಜಿ ನಂ.1 ಸಹ ಕಾಯ್ದೆ ಅಡಿಯಲ್ಲಿ ನಿಲ್ಲತಕ್ಕದಲ್ಲ. ಈ ದಾವೆಯಲ್ಲಿ ಕೋರಿದ ಯಾವುದೇ ಪರಿಹಾರಗಳನ್ನು ಹೊಂದಲು ಮತ್ತು ಮಧ್ಯಕಾಲೀನ ಅರ್ಜಿ ನಂ.1 ರಲ್ಲಿ ಕೋರಿದ ತಾತ್ಕಾಲಿಕ ಪರಿಹಾರ ಹೊಂದಲು ಸಹ ವಾದಿಗೆ ಕಾಯ್ದೆ ಅಡಿಯಲ್ಲಿ ಅವಕಾಶ ಇರುವುದಿಲ್ಲ. ದಾವೆಯನ್ನು ವಜಾ ಮಾಡುವಂತೆ ಆದೇಶವಾಗಲು ಪ್ರಾರ್ಥಿಸಿರುತ್ತಾರೆ.

5. ಉಭಯ ಪಕ್ಷಗಾರ ವಕೀಲರು ಮಂಡಿಸಿರುವ ವಾದವನ್ನು ಆಲಿಸಿದ್ದು ಮತ್ತು ಪಕ್ಷಗಾರರು ನ್ಯಾಯಾಲಯಕ್ಕೆ ಸಲ್ಲಿಸಿರುವ ಈ ದಾವೆಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

6. ಈ ಸಂದರ್ಭದಲ್ಲಿ ನ್ಯಾಯಾಲಯದ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.

## ಅಂಶಗಳು

1. ವಾದಿಯು ತಮ್ಮ ಪರವಾಗಿ ಮೇಲ್ನೋಟದ ದಾವೆ ಇದೆ ಎಂದು ಸಾಬೀತುಪಡಿಸುವರೇ?
2. ಅನುಕೂಲತೆಯ ಒಲವು ವಾದಿಯ ಪರವಾಗಿ ಇದೆಯೇ?
3. ವಾದಿಗೆ ಮಧ್ಯಂತರ ಅರ್ಜಿ ಸಂಖ್ಯೆ I ಪುರಸ್ಕರಿಸದಿದ್ದರೆ, ತುಂಬಲಾರದ ನಷ್ಟ, ಸರಿಪಡಿಸಲಾಗದ ಕ್ಷತಿ ಉಂಟಾಗುತ್ತದೆಯೇ?
4. ಏನು ಆದೇಶ?

7. ಮೇಲಿನ ಅಂಶಗಳಿಗೆ ನ್ಯಾಯಾಲಯವು ಈ ಕೆಳಕಂಡಂತೆ ಉತ್ತರುತ್ತದೆ:

ಅಂಶ 1: **ನಕಾರಾತ್ಮಕವಾಗಿ.**

ಅಂಶ 2: **ನಕಾರಾತ್ಮಕವಾಗಿ.**

ಅಂಶ 3: **ನಕಾರಾತ್ಮಕವಾಗಿ.**

ಅಂಶ.4: ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ.

## ಕಾರಣಗಳು

**8. ಅಂಶಃ 1 ರಿಂದ 3:-** ಈ ಮೂರು ಅಂಶಗಳು ಒಂದಕ್ಕೊಂದು ಅಂತರ ಸಂಬಂಧ ಹೊಂದಿರುವುದರಿಂದ, ಚರ್ಚೆಯ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಎಲ್ಲಾ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ವಾದಿಯ ಪರ ವಕೀಲರು ದಾವಾ ಆಸ್ತಿಯು ಮೂಲತಃ ಗೇಣಿ ಜಮೀನಾಗಿದ್ದು, ವಾದಿಯ ತಂದೆ ನೀರಮಣಿ ರಾಜ್ ಸಾಬ್ ಬಿನ್ ದಾದಾ ಸಾಬ್ ಮಲೆಬೆನ್ನೂರು ಇವರು ಕರ್ನಟಕ ಭೂ ಸುದಾರಣಾ ಕಾನೂನಿನ ಅನ್ವಯ ಗೇಣಿ ಹಕ್ಕನ್ನು ಪಡೆಯಲು ಪಾರಂ.7 ನು ಸಲ್ಲಿಸಿರುತ್ತಾರೆ. ಇದಲ್ಲದೇ ವಾದಿಯ ತಂದೆಗೆ ಬೇರೆ ಇನ್ನು 2 ಜಮೀನು ಇದ್ದು, ವಾದಿಯ ತಂದೆಗೆ ಹುರುಳಿ ಗ್ರಾಮದ ಸರ್ವೆ ನಂ.272 ರಲ್ಲಿ ಸೊರಬ ತಹಶೀಲ್ದಾರ್ ರವರು ದಿನಾಂಕ 07.05.1991 ರಂದು 3 ಎಕರೆ ತರಿ ಜಮೀನಿಗೆ ಹಕ್ಕುಪತ್ರ ನೀಡಿರುತ್ತಾರೆ. ಅದರಂತೆ ವಾದಿಯ ತಂದಗೆ ಹೆಸರಿಗೆ ಮ್ಯುಟೇಷನ್ ಸಹ ಆಗಿದ್ದು ಖಾತೆ ಬದಲಾವಣೆಯಾಗಿ ಪಹಣಿ

ವಾದಿಯ ತಂದೆ ಹೆಸರಿಗೆ ನಮೂದಾಗಿರುತ್ತದೆ. ವಾದಿಯ ತಂದೆಯು ದಿನಾಂಕ 18.07.2018 ರಂದು ತೀರಿಕೊಂಡಿದ್ದು, ವಾದಿಯ ತಂದೆಗೆ 1, 2 ನೇ ಪ್ರತಿವಾದಿಯರು ಹಾಗೂ ವಾದಿಯನ್ನು ಸೇರಿಸಿ 3 ಜನ ಗಂಡು ಮಕ್ಕಳಿದ್ದು, 3 ನೇ ಪ್ರತಿವಾದಿಯು ವಾದಿಯ ಅಣ್ಣನ ಮಗನಾಗಿದ್ದು, ವಾದಿಯ ತಂದೆ ಸಾಕ್ಷಿಗಳ ಸಮಕ್ಷಮ ಒಂದು ಮರಣಶಾಸನವನ್ನು ಹೇಳಿ ಬರೆಸಿ ಹರಿಹರದ ನೊಂದಣಿ ಕಛೇರಿಯಲ್ಲಿ ದಿನಾಂಕ 30.09.1996 ನೇ ಇಸವಿಯಲ್ಲಿ ನೊಂದಾಯಿಸಿರುತ್ತಾರೆ. ಸದರಿ ಮರಣಶಾಸನದ ಪ್ರಕಾರ ದಾವಾ ಅಸ್ತಿಯು ಅವರ ಮರಣದ ನಂತರ ವಾದಿಯ ಅನುಭವಕ್ಕೆ ಬಂದಿರುತ್ತದೆ. ಆ ಕಾರಣ ವಾದಿಯು ದಾವಾ ಆಸ್ತಿಯ ಮಾಲೀಕರಾಗಿ ಸ್ವಾದೀನದಲ್ಲಿನುಭವದಲ್ಲಿ ಇರುತ್ತಾರೆಂದು ವಾದ ಮಂಡಿರಸಿತ್ತಾರೆ. ಹೊಂದಿರುತ್ತಾರೆ. ವಾದಿಯು ಸದರಿ ನಿಲುವನ್ನು ಸಾಬೀತುಪಡಿಸಲು ವಾದಿಯು ಮರಣಶಾಸನದ ಪತ್ರ, ಪಹಣಿ ಪತ್ರಿಕೆ, ನಮೂನೆ ನಂ10, ಬೂ ನ್ಯಾಯಮಂಡಳಿಯವರ ಆದೇಶ ಹಾಗುಾ ಮ್ಯುಟೇಷನ್ ಪ್ರತಿಯನ್ನು ಹಾಜರುಪಡಿಸಿದ್ದು, ಈ ಮೇಲ್ನೋಟದ ದಾವೆ ಇದೆ ಎಂದು ರುಜುವಾತುಪಡಿಸಿರುತ್ತಾರೆ ಹಾಗೂ ಮಧ್ಯಂತರ ಅರ್ಜಿಯನ್ನು ತಿರಿಸ್ಕರಿಸಿದ್ದಲ್ಲಿ ಪ್ರತಿವಾದಿಯರಿಗಿಂತ ವಾದಿಗೆ ತುಂಬಲಾರದ ನಷ್ಟ ಹಾನಿ ಉಂಟಾಗುವ ಸಾಧ್ಯತೆ ಇರುವುದರಿಂದ ಈ ಮಧ್ಯಂತರ ಅರ್ಜ ಸಂಖ್ಯೆ 1 ನ್ನು ಪುರಸ್ಕರಿಸಬೇಕೆಂದು ವಾದ ಮಂಡಿಸಿರುತ್ತಾರೆ.

9. ಪ್ರತಿವಾದಿಯರ ಪರ ವಕೀಲರು ವಾದ ಮಂಡಿಸುತ್ತಾ ದಾವಾ ಆಸ್ತಿಯು ಪ್ರತಿವಾದಿಯರ ತಂದೆ ನೀರಮಣಿ ರಾಜಾ ಸಾಬ್ ಇವರು ನಮೂನೆ ನಂ.7 ರ ಗೇಣಿ ಅರ್ಜಿಯನ್ನು ಸಲ್ಲಿಸಿದ್ದು, ಅದರಂತೆ ದಿನಾಂಕ 19.08.1981 ರಂದು ಆದೇಶವಾಗಿದ್ದು, ಅದರಂತೆ ನಮೂನೆ ನಂ.10 ರ ಹಕ್ಕು ಪತ್ರವನ್ನು ನೀಡಿದ್ದು, ಅವರ ಹೆಸರಿಗೆ ಖಾತೆ ಪಹಣಿ ಬದಲಾವಣೆಯಾಗಿದ್ದು ಸಂಪೂರ್ಣವಾಗಿ ಸಂಗತಿಯನ್ನು ಒಪ್ಪಿಕೊಂಡಿರುತ್ತಾರೆ. ಆದರೆ ಸದರಿ ನೀರಮಣಿ ರಾಜಸಾಬ್ ರವರಿಗೆ ದಾವಾ ಆಸ್ತಿಯನ್ನು ಪರಬಾರೆ ಮಾಡುವ ಸಂಪೂರ್ಣ ಹಕ್ಕು ಇರುವುದಿಲ್ಲ. ಮುಂದುವರೆದು, ಪ್ರತಿವಾದಿಯರ ತಂದೆ ನೀರಮಣಿ ರಾಜಸಾಬ್ ಇವರು ಮರಣ ಹೊಂದುವ ಪೂರ್ವದಲ್ಲಿ ಸುಮಾರು 20 ವರ್ಷಗಳಿಂದ ವಾದಿ, 1 ಮತ್ತು 2 ನೇ ಪ್ರತಿವಾದಿಯರು ದಾವಾ ಆಸ್ತಿಯನ್ನು ಸಾಮೂಹಿಕವಾಗಿ ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ. ಅದೇ ರೀತಿ ಈ ಪ್ರಕರಣದ 3 ಮತ್ತು 4 ನೇ ಪ್ರತಿವಾದಿಯರಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಸ್ವಾದೀನ ಇರುವುದಿಲ್ಲ. ಆದರೆ ದಾವಾ ಸ್ವತ್ತಿನಲ್ಲಿ 1 ಎಕರೆ 20 ಗುಂಟೆ ಸ್ವತ್ತನ್ನು ಒಂದು ಸುಳ್ಳು ದಾಖಲೆಯನು ಸೃಷ್ಟಿಸಿ ತಮ್ಮ ಹೆಸರಿಗೆ ನಮೂದಿಸಿಕೊಂಡಿರುತ್ತಾರೆ. ಅದೇ ರೀತಿ ಈ ಪ್ರಕರಣದಲ್ಲಿ ವಾದಿ, 1 ಮತ್ತು 2 ನೇ

ಪ್ರತಿವಾದಿಯರಿಗೆ ದಾವಾ ಆಸ್ತಿಯಲ್ಲಿ 1/3 ನೇ ಬಾಗಂಶದ ಹಿಸ್ಸೆ ಹಕ್ಕು ಇರುತ್ತದೆಂದು ಸಂಪೂರ್ಣ ಆಸ್ತಿಯು ವಾದಿಗೆ ಯಾವುದೇ ರೀತಿಯ ಹಕ್ಕು ಸ್ವಾದೀನ ಹೊಂದಿರುವುದಿಲ್ಲ. ಈ ಪ್ರತಿವಾದಿಯರು ತಮ್ಮ ವಾದ ಮಂಡನೆಯೊಂದಿಗೆ ದಾವಾ ಅಸ್ತಿಯ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ಅದರಂತೆ ವಾದಿಯ ಮೇಲ್ನೋಟದ ದಾವೆ ಇದೆ ಎಂದು ತೋರಿಸಲು ಸಂಪೂರ್ಣವಾಗಿ ವಿಪಲವಾಗಿರುತ್ತದೆ. ಒಂದು ವೇಳೆ ಮಧ್ಯಂತರ ಅರ್ಜಿ ಸಂಖ್ಯೆ.1 ನ್ನು ಪುರಸ್ಕರಿಸಿದ್ದಲ್ಲಿ ವಾದಿಗಿಂತ ಪ್ರತಿವಾದಿಯರಿಗೆ ತುಂಬಲಾರದ ನಷ್ಟ ಹಾನಿ ಉಂಟಾಗುವ ಸಾಧ್ಯತೆ ಇರುವುದರಿಂದ ಈ ಮಧ್ಯಂತರ ಅರ್ಜಿ ಸಂಖ್ಯೆ .1 ನ್ನು ತಿರಸ್ಕರಿಸಬೇಕೆಂದು ಪ್ರಾರ್ಥಿಸಿರುತ್ತಾರೆ.

10. ಸಿವಿಲ್ ಪ್ರಕ್ರಿಯೆ ಸಂಹಿತೆ ಕ್ರಮಾದೇಶ XXXIX ನಿಯಮ 1 ಮತ್ತು 2 ರ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ವಿಲೇ ಮಾಡುವಾಗ ನ್ಯಾಯಾಲಯಕ್ಕೆ ಸದರಿ ಅರ್ಜಯನ್ನು ಸಲ್ಲಿಸಿದಂತಹ ಪಕ್ಷಗಾರನ್ನು ತಮ್ಮ ಪರವಾಗಿ ಮೇಲ್ನೋಟದ ದಾವೆ ಇದೆ ಎನ್ನುವುದನ್ನು ಹಾಗೂ ಅನುಕೂಲತನೆಯ ಒಳವು ತನ್ನ ಪರವಾಗಿ ಇದೆ ಒಂದು ವೇಳೆ ಅರ್ಜಿಯಲ್ಲಿ ಕೋರಿರುಂತೆ ಪ್ರತಿಬಂದಕಾಜ್ಞೆಯನ್ನು ನೀಡದೆ ಇದ್ದ ಪಕ್ಷದಲ್ಲಿ ತನಗೆ ಪ್ರತಿವಾದಿಯರಿಗಿಂತ ಹೆಚ್ಚು ನಷ್ಟ ಹಾಗೂ ಹಾನಿ ಉಂಟಾಗುತ್ತದೆಂದು ಸದರಿ ಅರ್ಜಿಯನ್ನು ಸಲ್ಲಿಸಿದಂತಹ ವ್ಯಕ್ತಿಯು ಮೇಲ್ನೋಟಕ್ಕೆ ಸಾಬೀತುಪಡಿಸುವ ಹೊಣಾಗಾರಿಕೆಯನ್ನು ಹೊಂದಿರುತ್ತಾನೆ. ಮೇಲ್ನೋಟದ ದಾವೆಯೆಂದರೆ ವಾದಿಯ ತನಗೆ ಒಂದು ವಸ್ತು ವಿಷಯದ ಬಗ್ಗೆ ತನೆಗೆ ಇದೆ ಎಂದು ಹೇಳಿಲಾದ ಹಕ್ಕಿನ ಬಗ್ಗೆ ವಿಚಾರಣೆಯಾಗಬಹುದಾದ ಪ್ರಕರಣ ಅಂದರೆ ಮೇಲ್ನೋಟಕ್ಕೆ ದಾವೆಯನ್ನು ವಿಚಾರಣೆ ಮಾಡಬಹುದೆಂದು ನ್ಯಾಯಾಲಯಕ್ಕೆ ಮೊದಲನೆಯದಾಗಿ ಕಂಡು ಬರಬೇಕಾಗುತ್ತದೆ. ಕೇವಲ ಮೇಲ್ನೋಟದ ದಾವೆ ತನ್ನ ಪರವಾಗಿ ಇದೆ ಎಂದು ಮಾತ್ರಕ್ಕೆ ವಾದಿಯು ತಾತ್ಕಾಲಿಕ ನಿರ್ಬಂದಕಾಜ್ಞೆ ಪರಿಹಾರಕ್ಕೆ ಅರ್ಹನಾಗಿರುವುದಿಲ್ಲ. ಅದನ್ನು ಹೊರತುಪಡಿಸಿ ವಾದಿಯು ತನ್ನ ಪರವಾಗಿ ಅನುಕೂಲತೆಯ ಒಳವು ಅಂದರೆ ಒಂದು ವೇಳೆ ಆರ್ಜಿಯನ್ನು ಪುರಸ್ಕರಿಸದೇ ಇದ್ದರೆ ಪ್ರತಿವಾದಿಗೆ ಹೊಲಿಸಿದ್ದಲ್ಲಿ ತನಗೆ ಹೆಚ್ಚಿನ ಅನಾನೂಕೂಲತೆ ಉಂಟಾಗುತ್ತದೆಂದು ನ್ಯಾಯಾಲಯದ ಮಾನದಟ್ಟ ಮಾಡಬೇಕಾಗುತ್ತದೆ. ಅದೇ ರೀತಿ ತನ್ನ ಪರವಾಗಿ ತಾತ್ಕಾಲಿಕ ನಿರ್ಬಂದಕಾಜ್ಞೆಯನ್ನು ನೀಡದೆ ಇದ್ದ ಪಕ್ಷದಲ್ಲಿ ತನಗೆ ಪ್ರತಿವಾದಿಗಿಂತ ಹೆಚ್ಚು ಹಾನಿ ಮತ್ತು ನಷ್ಟು ಉಂಟಾಗುತ್ತದೆ ಹಾಗೂ ಸದರಿ ನಷ್ಟವನ್ನು ಯಾವುದರಿಂದಲೂ ಭರಿಸಲು ಸಾಧ್ಯವಿಲ್ಲವೆಂದು ಸಾಬೀತುಪಡಿಸಬೇಕಾಗುತ್ತದೆ. ಸದರಿ 3 ಅಂಶಗಳನ್ನು ವಾದಿಯು ಸಾಬೀತುಪಡಿಸಿದರೂ ಸಹ ತಾತ್ಕಾಲಿಕ ಪ್ರತಿಬಂದಕಾಜ್ಞೆ ಆದೇಶ ನೀಡುವುದು ನ್ಯಾಯಾಲಯದ ವಿವೇಚನೆಗೆ ಬಿಟ್ಟು ವಿಚಾರವಾಗಿರುತ್ತದೆ. ಒಂದು ವೇಳೆ ವಾದಿಯು ವಾಸ್ತವ

ಸಂಗತಿಗಳನ್ನು ಮಾರೆಮಚಿ ಶುದ್ಧ ಹಸ್ತದಿಂದ ನ್ಯಾಯಾಲಯಕ್ಕೆ ಬಂದಿಲ್ಲವೆಂದು ಕಂಡು ಬಂದರೂ ಸಹ ವಾದಿಗೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶಕ್ಕೆ ಅರ್ಹನಾಗಿರುವುದಿಲ್ಲ. ಎಲ್ಲ ಅಂಶಗಳ ಗಮನದಲ್ಲಿರಿಸಿಕೊಂಡು ಪ್ರಸ್ತುದ ಪ್ರಕರಣವನ್ನು ಚರ್ಚೆಗೆ ತೆಗೆದುಕೊಳ್ಳಲಾಗಿದೆ.

11. ದಾವಾ ಸ್ವತ್ತು ತನ್ನ ಸ್ವಾಧೀನಕ್ಕೆ ಹಾಗೂ ಮೇಲ್ನೋಟಕ್ಕೆ ತನ್ನ ಪರವಾಗಿ ದಾವೆ ಇದೆ ಹಾಗೂ ಅನುಕೂಲತೆಯ ಒಲವು ತನ್ನ ಪರವಾಗಿ ಇದೆ ಎಂದು ತೋರಿಸಲು ವಾದಿಯು ತನ್ನ ವಾದ ಪತ್ರದೊಂದಿಗೆ ಸಲ್ಲಿಸಿದ ದಿನಾಂಕ 30.09.1996 ರ ನೊಂದಾಯಿತ ಮರಣಶಾಸನದ ಪತ್ರವನ್ನು ಹಾಜರುಪಡಿಸಿದ್ದು, ಸದರಿ ದಾಖಲೆಯಂತೆ ದಾವಾ ಆಸ್ತಿಯು ವಾದಿಯ ಹೆಸರಿಗೆ ಮರಣಶಾಸನದ ಪ್ರಕಾರ ಬರೆದಿರುವ ಬಗ್ಗೆ ಕಂಡು ಬರುತ್ತದೆ.ಆದರೆ ವಾದಿಯು ಹಾಜರುಪಡಿಸಿದ 2024-25 ನೇ ಸಾಲಿನ ಪಹಣಿ ಪತ್ರಿಕೆಯನ್ನು ಪರಿಶೀಲಿಸಿದ್ದಲ್ಲಿ ಸದರಿ ಸರ್ವೆ ನಂ.272 ಪೋಡಿಯಾಗಿ 3 ವಿಬಾಗಗಳಾಗಿರುತ್ತವೆ. ಅದರಲ್ಲಿ 1 ಎಕರೆ 20 ಗುಂಟೆ ಜಮೀನು 1 ನೇ ಪ್ರತಿವಾದಿಯ ಹೆಸರಿನಲ್ಲಿ ನಮೂದಾಗಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಅದೇ ರೀತಿ ವಾದಿಯು ನಮೂನೆ ನಂ.7 ಹಾಗೂ ಭೂ ನ್ಯಾಯಮಂಡಳಿಯವರು ಮಾಡಿದ ಆದೇಶದ ಪ್ರತಿಯನ್ನು ಹಾಜರುಪಡಿಸಿದ್ದು, ಅದರಂತೆ ವಾದಿಯ ತಂದೆಗೆ ಸರ್ವೆ ನಂ.272 ರಲ್ಲಿ 3 ಎಕರೆ ಜಮೀನು ಮಂಜೂರಾಗಿದ್ದ ಬಗ್ಗೆ ಸ್ಪಷ್ಟವಾಗಿ ಕಂಡು ಬರುತ್ತದೆ. ಅದರಂತೆ ಎಂ.ಆರ್ ನಂ.31/1991-91 ರಂತೆ ವಾದಿಯ ಹೆಸರು ಪಹಣಿ ಪತ್ರಿಕೆಯಲ್ಲಿ ದಾಖಲಾಗಿದ್ದು ಸಹ ಕಂಡು ಬರುತ್ತದೆ. ಆದರೆ ಪ್ರತಿವಾದಿಯರು ಹಾಜರುಪಡಿಸಿದ ದಾಖಲೆಗಳಂತೆ ಸರ್ವೆ ನಂ.272 ಪೋಡಿಯಾಗಿ 3 ವಿಬಾಗಗಳಾಗಿರುತ್ತವೆ. ಅದರಲ್ಲಿ 1 ರಿಂದ 3 ನೇ ಪ್ರತಿವಾದಿಯರ ಹೆಸರಿಗೆ ತಲಾ 1 ಎಕರೆ 20 ಗುಂಟೆ ಜಮೀನು ಜಂಟಿಯಾಗಿ ಖಾತೆಯಾಗಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಅದೇ ರೀತಿ ಈ ಪ್ರಕರಣದಲ್ಲಿ ವಾದಿ, 1 ಮತ್ತು 2 ನೇ ಪ್ರತಿವಾದಿಯರು ವಾದಿಯ ತಂದೆ ನೀರುಮಣಿ ರಾಜ್ ಸಾಬ್ ರವರ ಮಕ್ಕಳು ಇರುತ್ತಾರೆಂದು ವಾದ ಮಂಡಿಸಿದ್ದು. ಆದರೆ ಈ ಪ್ರಕರಣದ ವಾದಿ, 1 ಮತ್ತು 2 ನೇ ಪ್ರತಿವಾದಿಯರು ಸಹೋದರರಾಗಿರುತ್ತಾರೆ. ಅದೇ ರೀತಿ ವಾದಿಯ ತಂದೆ ವಾದಿಯ ಪರ ಮರಣಶಾಸನದ ಪ್ರಕಾರ ದಾವಾ ಆಸ್ತಿಯನ್ನು ಬರೆದಿರುವ ಬಗ್ಗೆ ಉಭಯಪಕ್ಷಗಾರರ ಸಾಕ್ಷ್ಯದಿಂದ ತಿಳಿದು ಬಂದಿರುತ್ತದೆ. ಈ ಹಂತದಲ್ಲಿ ವಾದಿ ಮತ್ತು ಪ್ರತಿವಾದಿಯರು ಹಾಗೂ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ್ದಲ್ಲಿ ದಾವಾ ಆಸ್ತಿಯು ದಾವೆ ದಾಖಲಿಸಿದ ದಿನದಂದು 3 ವಿಬಾಗಗಳಾಗಿದ್ದು, ಅದರಂತೆ 1 ರಿಂದ 3 ನೇ ಪ್ರತಿವಾದಿಯರ ಹೆಸರಿನಲ್ಲಿ ದಾವಾ ಆಸ್ತಿಯ ಪಹಣಿ ಪತ್ರಿಕೆಯನ್ನು ದಾಖಲಾಗಿದ್ದ ಬಗ್ಗೆ ಸ್ಪಷ್ಟವಾಗಿ ಕಂಡು ಬಂದಿರುವುದರಿಂದ ವಾದಿಯ ದಾವೆ ದಾಖಲಿಸಿದ ದಿನದಂದು ಸಂಪೂರ್ಣ ಆಸ್ತಿಯು ಕಬ್ಜಾ ಸ್ವಾದೀನಾನುಭವದಲ್ಲಿರುವುದು ಅಸ್ಪಷ್ಟತೆ ಇರುವುದು ಕಂಡು ಬರುತ್ತದೆ. ಅದೇ

ರೀತಿ ವಾದಿ, 1 ಮತ್ತು 2 ನೇ ಪ್ರತಿವಾದಿಯರು ಸಹೋದರರಾಗಿರುತ್ತಾರೆ. ದಾವಾ ಆಸ್ತಿಯಲ್ಲಿ ವಾದಿಯ ತಂದಗೆ ಮಂಜೂರಾಗಿರುವುದು ಒಪ್ಪಿತ ಸಂಗತಿಯಾಗಿರುವುದರಿಂದ ಅವರೆಲ್ಲರಿಗೂ ಸಹ ಸಮಾನವಾದ ಹಿಸ್ಸಾ ಹಕ್ಕು ಇರುತ್ತದೆ. ಆ ಕಾರಣ ಇಂತಹ ಪ್ರಕರಣದಲ್ಲಿ ದಾವಾ ಆಸ್ತಿಯಲ್ಲಿ ಹಕ್ಕುದಾರರ ವಿರುದ್ಧ ತಾತ್ಕಲಿಕ ಪ್ರತಿಬಂಧಕಾಜ್ಞೆ ಆದೇಶವನ್ನು ನೀಡುವುದು ಸೂಕ್ತವಲ್ಲವೆಂದು ಪರಿಗಣಿಸಿದ್ದು, ಅದೇ ರೀತಿ ವಾದಿಯ ವಾದ ಪತ್ರ, ಮಧ್ಯಂತರ ಅರ್ಜಿ ಸಂಖ್ಯೆ.1 ರೊಂದಿಗೆ ಸಲ್ಲಿಸಿದ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ್ದಲ್ಲಿ ವಾದಿಯು ತನ್ನ ಪರವಾಗಿ ಮೇಲ್ನೋಟದ ದಾವೆ ಎಂದು ರುಜುವಾತುಪಡಿಸಲು ಸಂಪೂರ್ಣವಾಗಿ ವಿಫಲವಾಗಿರುತ್ತದೆ.ಅದೇ ರೀತಿ ಒಂದು ವೇಳೆ ವಾದಿಯು ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ.1 ನ್ನು ಪುರಸ್ಕರಿಸಿದ್ದಲ್ಲಿ ವಾದಿಗಿಂತ ಪ್ರತಿವಾದಿಯರಿಗೆ ಹೆಚ್ಚಿನ ಹಾನಿ ನಷ್ಟ ಉಂಟಾಗುವ ಸಾಧ್ಯತೆ ಇರುವುದರಿಂದ ಈ ಮಧ್ಯಂತರ ಅರ್ಜಿಯನ್ನು ತಿರಸ್ಕರಿಸುವುದು ಸೂಕ್ತವೆಂದು ಪರಿಗಣಿಸಿ ಮೇಲಿನ **ಅಂಶಗಳು 1 ರಿಂದ 3 ಅನ್ನು ನಕಾರಾತ್ಮಕವಾಗಿ** ಉತ್ತರಿಸಲಾಗಿದೆ.

12. **ಅಂಶ 4:**ಅಂಶಗಳು 1 ರಿಂದ 3 ರಲ್ಲಿನ ಚರ್ಚೆಯಿಂದ ಬಂದಂತ ಉತ್ತರದಿಂದಾಗಿ, ಈ ಕೆಳಕಂಡಂತೆಃ

## ಆದೇಶ

ವಾದಿಯು ಸಿವಿಲ್ ಪ್ರಕ್ರಿಯೆ ಸಂಹಿತೆ ಕ್ರಮಾದೇಶ XXXIX ನಿಯಮ 1 ಮತ್ತು 2 ರ ಅಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ I ಅನ್ನು ತಿರಸ್ಕರಿಸಲಾಗಿದೆ.

ವೆಚ್ಚಗಳ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

*(ಆದೇಶದ ಉಕ್ತಲೇಖನವನ್ನು ಶೀಘ್ರಲಿಪಿಗಾರರಿಗೆ ಕೊಟ್ಟು ಅದನ್ನು ಅವರಿಂದ ಬೆರಳಚ್ಚುಪಡಿಸಿ ಗಣಕೀಕೃತಗೊಳಿಸಿದ್ದು, ನಂತರ ತಿದ್ದುಪಡಿ ಮಾಡಿ, ಸಹಿ ಮಾಡಿ ಇಂದು ಅಂದರೆ 04 ನೇ ಜೂನ್, 2026 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)*

**(ರಾಜು. ಕೃ .ಶೇಡಬಾಳ್‌ಕರ್)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು ಸೊರಬ.

(ತೆರೆದ ನ್ಯಾಯಾಲಯದಲ್ಲಿ ಆದೇಶವನ್ನು ಘೋಷಿಸಲಾಯಿತು.)

**ಆದೇಶ**

ವಾದಿಯು ಸಿವಿಲ್ ಪ್ರಕ್ರಿಯೆ ಸಂಹಿತೆ ಕ್ರಮಾದೇಶ XXXIX ನಿಯಮ 1 ಮತ್ತು 2 ರ ಅಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ I ಅನ್ನು ತಿರಸ್ಕರಿಸಲಾಗಿದೆ.

ವೆಚ್ಚಗಳ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

For compliance U/Sec.89 of C.P.C.

Call on 08.07.2026.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು ಸೊರಬ.